ಆಯ್ತಾ. ನಮ್ಮೊಟ್ಟಿಗೇ ಇರು. ನಾವು ನಿನ್ ಬೆನ್ನಿಗೆ ಬಿದ್ದೋರು ಮರೀಬ್ಯಾಡ' ಸುಶೀಲ ಬಿಕ್ಕತೊಡಗಿದರೆ ಶ್ಯಾಮಲ ಸೊರ್ ಸೊರ್ ಮಾಡತೊಡಗಿದಳು. ಈಶ್ವರನಿಗೆ ಕರುಳಲ್ಲೇನೋ ಆಗತೊಡಗಿ ಸುಮ್ಮನಿರಿ ಅನ್ನುವಂತೆ ಸನ್ನೆ ಮಾಡತೊಡಗಿದ.

ಚಂದ್ರು ಮುರುಡೇಶ್ವರಕ್ಕೆ ಒಂದು ರಾತ್ರಿ ಬಂದವ ಕೇಶವ ಮತ್ತವನ ಮಕ್ಕಳನ್ನು ಬಯ್ದು ತನಗೆ ಅರ್ಜೆಂಟಾಗಿ ಐವತ್ತು ಸಾವ್ರ ಕೊಡಿಸು ಅಂತ ಗೋಗರೆದು ಹೋದ. ಹತ್ತು ದಿನವಾಗಿತ್ತು. ಕೇಶವ ಬಂದಿಳಿದ. ಬೆಂಗಳೂರಿಗೆ ಕರೆದೊಯ್ಯುವ ಪ್ರಸ್ತಾಪ ಮಾಡಿದ. ಏನು ಅರ್ಜೆಂಟು ಅವನಿಲ್ಲಿ ಇರಲಿ ಅಂತ ತಂಗಿಯರು ವಾದಿಸಿದರು. 'ಕೇಶವ, ಎಷ್ಟೋ ವರ್ಷ ಆಗೊಯ್ತು. ಇವ್ರಿಗೆಲ್ಲ ಒಂದ್ ಐವತ್‌ಐವತ್ ಸಾವ್ರನಾರು ಕೊಡುವ ಅಂತ...' ಈಶ್ವರ ಅಂದದ್ದಕ್ಕೆ ಕೇಶವ ಇಷ್ಟಗಲ ಕಣ್ಣರಳಿಸಿದ. ಶ್ಯಾಮಲ, ಸುಶೀಲರತ್ತ ನೋಡಿ, 'ನಂಗೊತ್ತಿತ್ತು. ನೀವು ವತ್ತಾಯ ಮಾಡಿ ಕರಕೊಂಡು ಬಂದಾಗ್ಲೆ ಏನೋ ಮಶ್ಕೀರಿ ಮಾಡು ಆಲೋಚ್ನೆ ಅದೆ ಅಂತ ಅಂದ್ಕಂಡಿದ್ದೆ...' ಅಂದ. ಮಾತಿಗೆ ಮಾತು ಬೆಳೆದು ದೊಡ್ಡ ಜಗಳವೆ ಆಗಿಹೋಯ್ತು. ಈಶ್ವರನೆ ಕೊನೆಗೆ ಸದ್ಯ ಬೆಂಗಳೂರಿಗೆ ಹೋಗಿ ಆಮೇಲೆ ನೋಡುವ ತೀರ್ಮಾನಕ್ಕೆ ಬರಬೇಕಾಯಿತು. 'ನಮಗೂ ಗೊತ್ತದೆ. ಹ್ಯಾಂಗೆ ನೀನು ಆಸ್ತಿ ಇಟ್ಕೊತ್ತಿಯೊ ನೋಡತೇವೆ' ಅಂತ ಕೇಶವನಿಗೆ ಹೇಳಿದವರು, 'ಅಣ್ಣ ಮರೀಬೇಡ, ದಿನಾ ಫೋನು ಮಾಡತಿರು ಆಯ್ತಾ...' ಅಂತ ಈಶ್ವರನಿಗಂದರು ಹೊರಡುವಾಗ.

ಬೆಂಗಳೂರು ಸೇರಿದ ದಿನದಿಂದಲೆ ದಿನಕ್ಕೆ ನಾಕೈದು ಫೋನು ಈಶ್ವರನಿಗೆ ಕಾಯಂ ಬರುತ್ತಿತ್ತು. ಕೇಶವ ಕೂಗಾಡತೊಡಗಿದ. 'ನಂಗೊತ್ತಿತ್ತು, ಆ ರಂಡೇರು ನಿನ್ ತಲೆಗೆ ಸಮಾ ತುಂಬತಾರೆ ಅಂತ. ಅವ್ರಿಗೆಷ್ಟು ಸಹಾಯ ಮಾಡೀದೆ ನಾನು. ಅಣ್ಣ... ಇಲ್ಲಿ ನಿಂಗ್ಯಾರು ಏನು ಕಮ್ಮಿ ಮಾಡಿದ್ದು? ಈ ಕಡಿ ಜ್ಞಾನವೆ ಇಲ್ದ ನಿಂಗೆ, ಕುಂತಲ್ಲಿ ಊಟ, ತಿಂಡಿ, ಚಾ ಎಲ್ಲ ನಾನು ನನ್ ಹೆಂಡ್ತಿ ಆಮೇಲೆ ನನ್ ಸೊಸೆ ಶುಭಾ ಕೊಡತಿದ್ರಲ, ನೀನು ಮಲಗ್‌ದ್ಯಾ ಎದ್ಯಾ ಹುಶಾರಾಗಿದ್ಯಾ ಅಂತೆಲ್ಲ ಕಾಳಜಿ ಮಾಡಿದ್ರಲ ಮೂವತ್ಮೂರು ವರ್ಷ... ಅಣ್ಣ ಅನ್ನೂ ಋಣಕ್ಕಲ್ಲ ಅನುಸ್ತದ ನಿಂಗೆ' ಕಣ್ಣೊರೆಸಿಕೊಳ್ಳುತ್ತ ಹತ್ತಿರ ಕೂತವನ್ನ ಈಶ್ವರ ಮೌನದಲ್ಲಿ ನೋಡಿದ.

ಬೆಳಗ್ಗೆ ಮೆತ್ತಿನ ಬಾಗಿಲ ಹತ್ತಿರ ಒಬ್ಬನೆ ಕೂತಿದ್ದ. ಎದುರು ತಾರಸಿಯಮೇಲೆ ಬಟ್ಟೆಯೊಣಗಿಸುವ ಹಗ್ಗ ಕಾಣುತ್ತಿತ್ತು. ತಾನು ತನ್ನ ವತ್ಸಲಳನ್ನಾದರೂ ನೋಡುತ್ತ ಕಾಲ ಕಳೆಯಬಹುದು ಅನಿಸಿತು. ತನಗೆ ಮತ್ತೆ ನೆನಪು ಅಳಿಸಿಹೋಗುವ ಲಕ್ಷಣ ಕಾಣುತ್ತಿದೆ, ಯಾವ ಕ್ಷಣಕ್ಕಾದರೂ ಹಾಗಾಗಬಹುದು ಅಂತ ಮೆಸೇಜು ಕಳಿಸಿದ ಮೂರೂ ತಂಗಿಯರಿಗೆ. ನಂತರ ಮೆಸೇಜು ಅಳಿಸಿಹಾಕಿದ.

ಸ್ವಲ್ಪ ಹೊತ್ತಿಗೆ ಬೆಳಗಿನ ಚಹಾ ತಿಂಡಿಗೆ ಕರೆಯ ಬಂದ ಶುಭಾಳನ್ನು ಗುರುತು ಸಿಗದವನಂತೆ ಪಿಳಿಪಿಳಿ ನೋಡಿದವ, 'ಮಾವಿನಕುರ್ವೆ ಮಾವಿನಕುರ್ವೆ...' ಅಂತ ಗಡುಸಾಗಿ ಹೇಳುತ್ತಾ ಶೂನ್ಯವನ್ನು ದಿಟ್ಟಿಸತೊಡಗಿದ. 'ಮತ್ತೆ ಮೊದಲಿನಂಗಾಗದೆ... ಅಯ್ಯೋ ದೇವ್ರೆ' ಅಂತ ಕೂಗುತ್ತ ಶುಭಾ ದಡದಡನೆ ಮೆಟ್ಟಿಲಿಳಿದು ಕೆಳಗೆ ಧಾವಿಸಿದಳು.



**ಬನವಾಸಿ ವೆಂಕಟೇಶ ದೀಕ್ಷಿತ್**

ಕಲಬುರ್ಗಿಯಲ್ಲಿ ಅಂಚೆ ಇಲಾಖೆಯಲ್ಲಿ ವೃತ್ತಿ ಜೀವನ ಆರಂಭಿಸಿದ ವೆಂಕಟೇಶ ದೀಕ್ಷಿತ್, ಭಾರತೀಯ ಸೇನೆಯಲ್ಲಿ ವಾರಂಟ್ ಆಫೀಸರಾಗಿ ಕಾಶ್ಮೀರದ ಬಾರಾಮುಲ್ಲಾ, ಕುಪ್ವಾಡಾ, ಶ್ರೀನಗರ, ನಗ್ರೋಟ ಮತ್ತು ನವದೆಹಲಿ, ನಾಗಪುರಗಳಲ್ಲಿ ಸೇವೆ ಸಲ್ಲಿಸಿದ್ದಾರೆ. ಬಳಿಕ, ದೂರಸಂಪರ್ಕ ಇಲಾಖೆಯಲ್ಲಿ ಹಿರಿಯ ಅಧಿಕಾರಿಯಾಗಿ ನಿವೃತ್ತರು. ಪ್ರಕಟಿತ ಕಥಾಸಂಕಲನಗಳು: 'ಕಾವಡಿ', ಬೇರಿಗಂಟಿದ ಮಣ್ಣು', 'ಗಡಿಯೀಚೆಯ ಸದ್ದುಗಳು'. ಕಾದಂಬರಿ: 'ನಕ್ಷತ್ರ ನುಂಗುವ ಸಮಯ'. ಪ್ರಸ್ತುತ ಬೆಂಗಳೂರಿನಲ್ಲಿ ವಾಸ.